# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003.**

ಸಂಖ್ಯೆ: ವೈ2(ಇ.ಪ)ಡಿ.ಪ್ರಾ.ಯಂ.ಬೈ.ಖ/33/2018-19 ದಿನಾಂಕ: 31.01.2019.

**ದರಪಟ್ಟಿ ಆಹ್ವಾನ ಪತ್ರ**

**ವಿಷಯ**: ಇತರೆ ಪರೀಕ್ಷೆಗಳ ವಿಭಾಗದಲ್ಲಿನ ಡಿಜಿಟಲ್ ಫ್ರಾಂಕಿಂಗ್ ಯಂತ್ರವನ್ನು ಬೈಬ್ಯಾಕ್ ಮೂಲಕ ಖರೀದಿಸಲು ದರಪಟ್ಟಿ ಆಹ್ವಾನಿಸುವ ಬಗ್ಗೆ.

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಇತರೆ ಪರೀಕ್ಷೆಗಳ ವಿಭಾಗದ ಚಾಲ್ತಿ ಶಾಖೆಯಲ್ಲಿ ನಿರ್ವಹಣೆಯಲ್ಲಿರುವ ಹಾಲಿ 01 ಡಿಜಿಟಲ್ ಫ್ರಾಂಕಿಂಗ್ ಯಂತ್ರ ಸಂಖ್ಯೆ ಡಿಎಂ140ಐ (ಮಿಷಿನ್ ನಂ.ಪಿ673835) ಬೈಬ್ಯಾಕ್ ಮಾಡಿ 01 ಹೊಸ ಡಿಜಿಟಲ್ ಫ್ರಾಂಕಿಂಗ್ ಯಂತ್ರವನ್ನು ಖರೀದಿಸುವ ಸಂಬಂಧ ದರಪಟ್ಟಿ ಆಹ್ವಾನಿಸಲಾಗಿದೆ. ಸದರಿ ಕಾರ್ಯಕ್ಕೆ ಅನುಗುಣವಾಗಿ ಬೈಬ್ಯಾಕ್ ಮೊತ್ತ ಮತ್ತು ಹೊಸ ಡಿಜಿಟಲ್ ಫ್ರಾಂಕಿಂಗ್ ಯಂತ್ರ ಪೂರೈಕೆಗೆ ತಗಲುವ ಮೌಲ್ಯ ಹಾಗೂ ಅಳವಡಿಕೆ ಮಾಡಲು ಎಲ್ಲಾ ತೆರಿಗೆ ಸೇರಿ ತಗಲುವ ವೆಚ್ಚವನ್ನು ದಿನಾಂಕ: 04.02.2019ರ ಸಂಜೆ.4.00 ಗಂಟೆಯೊಳಗೆ ಮಂಡಳಿಗೆ ಮುಚ್ಚಿದ ಲಕೋಟೆಯಲ್ಲಿ ನಿರ್ದೇಶಕರು(ಇತರೆ ಪರೀಕ್ಷೆಗಳು) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಅಂಚೆ/ಮುದ್ದಾಂ ಮೂಲಕ ದರಪಟ್ಟಿಯನ್ನು ಸಲ್ಲಿಸಲು ತಿಳಿಸಿದೆ.

| ಕ್ರ ಸಂ | ಬೈಬ್ಯಾಕ್ ಮೂಲಕ ಪಡೆಯುವ ಡಿಜಿಟಲ್ ಫ್ರಾಂಕಿಂಗ್ ಯಂತ್ರದ ಮೌಲ್ಯ ಒಂದಕ್ಕೆ | ಹೊಸದಾಗಿ ಖರೀದಿಸುವ ಡಿಜಿಟಲ್ ಫ್ರಾಂಕಿಂಗ್ ಯಂತ್ರದ ಮೌಲ್ಯ ಒಂದಕ್ಕೆ (ಎಲ್ಲಾ ತೆರಿಗೆ ಸೇರಿ) |
|---|---|---|
| | | |

**ಷರತ್ತುಗಳು:-**

1. ಡಿಜಿಟಲ್ ಫ್ರಾಂಕಿಂಗ್ ಯಂತ್ರ ಅಳವಡಿಕೆಗೆ ಸಂಬಂಧಿಸಿದಂತೆ ಎಲ್ಲಾ ತೆರಿಗೆ ಸೇರಿದಂತೆ ದರಗಳನ್ನು ನಮೂದಿಸುವುದು. ಒಟ್ಟಾರೆ ಅತಿ ಕಡಿಮೆ ದರ ನಮೂದಿಸುವ ಸಂಸ್ಥೆಯ ದರವನ್ನು ಮಾತ್ರ ಪರಿಗಣಿಸಲಾಗುವುದು.
2. ಅಳವಡಿಕೆ ಮಾಡುವ ಡಿಜಿಟಲ್ ಫ್ರಾಂಕಿಂಗ್ ಯಂತ್ರ ಅಧಿಕೃತ ಸಂಸ್ಥೆಯಿಂದ ಉತ್ತಮ ಗುಣಮಟ್ಟ ಹೊಂದಿರಬೇಕು.
3. ಕಳಪೆ ಗುಣಮಟ್ಟದ ಸಾಮಗ್ರಿಗಳನ್ನು ಅಳವಡಿಕೆ ಮಾಡಿದ್ದಲ್ಲಿ ಅಂತಹ ಸಾಮಗ್ರಿಗಳನ್ನು ಮಂಡಳಿಯಲ್ಲಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದಲ್ಲದೆ ಮಂಡಳಿ ಇದಕ್ಕೆ ಯಾವುದೇ ಬಿಲ್ಲಿನ ಮೊತ್ತ ಪಾವತಿಸುವುದಿಲ್ಲ.
4. ಸದರಿ ಕಾರ್ಯಕ್ಕೆ ಮಂಡಳಿಯಿಂದ ಯಾವುದೇ ಮುಂಗಡ ಹಾಗೂ ಸಾರಿಗೆ ವೆಚ್ಚ ನೀಡಲಾಗುವುದಿಲ್ಲ.
5. ಅಳವಡಿಕೆಗೆ ಸಂಬಂಧಿಸಿದಂತೆ ವೆಚ್ಚದ ಬಿಲ್ಲಿನ ಮೊತ್ತದಲ್ಲಿ ಅನ್ವಯಿಸುವ ತೆರಿಗೆಗಳನ್ನು ಕಟಾಯಿಸಿ ನಿಯಮಾನುಸಾರ ಚೆಕ್ ಮೂಲಕ ಪಾವತಿಸಲಾಗುವುದು.
6. ಅತಿ ಕಡಿಮೆ ದರ ಸೂಚಿಸಿ ಆಯ್ಕೆಯಾಗುವ ಸಂಸ್ಥೆಯು (ಜಿ.ಎಸ್.ಟಿ.ಒಳಗೊಂಡಂತೆ) ಅಳವಡಿಕೆಗೆ ನೀಡಲಾಗುವ ಕಾರ್ಯಾದೇಶದಲ್ಲಿ ಸೂಚಿಸುವ ದಿನಾಂಕದೊಳಗೆ ಕಾರ್ಯವನ್ನು ಪೂರೈಸುವುದು. ವಿಳಂಬವಾದಲ್ಲಿ ವಿಳಂಬದ ಅವಧಿಗೆ ದಿನವೊಂದಕ್ಕೆ ರೂ.500-00ರಂತೆ ದಂಡವನ್ನು ಬಿಲ್ಲಿನ ಮೊತ್ತದಲ್ಲಿ ಕಟಾಯಿಸಲಾಗುವುದು.
7. ಲಕೋಟೆ ಮೇಲೆ ಕಡ್ಡಾಯವಾಗಿ "ಡಿಜಿಟಲ್ ಫ್ರಾಂಕಿಂಗ್ ಯಂತ್ರ ಖರೀದಿ & ಅಳವಡಿಕೆ ಸಂಬಂಧಿಸಿದ ದರಪಟ್ಟಿ" ಎಂದು ನಮೂದಿಸುವುದು.
8. ದರಪಟ್ಟಿ ಅಂತಿಮ ನಿರ್ಧರಣೆಯಲ್ಲಿ ನಿರ್ದೇಶಕರ ನಿಲುವು ಅಂತಿಮವಾಗಿರುತ್ತದೆ.

ನಿರ್ದೇಶಕರು
(ಇತರೆ ಪರೀಕ್ಷೆಗಳು)

**ಪ್ರತಿಗಳು:-**

1) ಮಂಡಳಿಯ ಸೂಚನಾ ಫಲಕಕ್ಕೆ
2) ಕಛೇರಿ ಪ್ರತಿ.

D:\KSEEB (OTHER EXAMS)\ADMN (OE)\Y2 SECTION\Y SECTION\printre,toner supply .docx